O.S. 13/2015
P.W.1

<u>ಸಾಕ್ಷಿಯನ್ನು ದಿನಾಂಕಃ 03-04-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ</u>

ನನ್ನ ತಾಯಿ ಹಾಗೂ 8 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ಖರೀದಿಯಾದ 1 ವರ್ಷಗಳ ನಂತರ ಗೊತ್ತಾಗಿರುತ್ತದೆ. ಆ ರೀತಿ ಖರೀದಿಯಾಗುವ ಕಾಲಕ್ಕೆ ದಾವಾ ಆಸ್ತಿಯ ಪಹಣಿ ನನ್ನ ತಾಯಿಯ ಹೆಸರಿನಲ್ಲಿತ್ತು. ಯಾವಾ ಆಧಾರದ ಮೇಲೆ ಪಹಣಿ ನನ್ನ ತಾಯಿಯ ಹೆಸರಿಗೆ ದಾಖಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಖರೀದಿ ಮಾಡುವ ಮೊದಲು 8 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಹರಪನಹಳ್ಳಿಯಲ್ಲಿ ವಿಚಾರಿಸಿದ ವಿಚಾರ ನನಗೆ ಗೊತ್ತಿಲ್ಲ. ಖರೀದಿಯಾಗುವ 30 ವರ್ಷ ಪೂರ್ವದಲ್ಲಿ ನಾನು ಊರು ಬಿಟ್ಟಿದ್ದೆನು. 8 ನೇ ಪ್ರತಿವಾದಿ ಖರೀದಿಸಿದ ಜಮೀನನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಯ ಪೂರ್ವಕ್ಕೆ ಹಂಪಣ್ಣನವರ ಹೊಲ, ದಕ್ಷಿಣಕ್ಕೆ ಹಳ್ಳ, ಪಶ್ಚಿಮಕ್ಕೆ ಈಜಾರಿ ಶಿರಸಪ್ಪರವರು ದೇವಸ್ಥಾನಕ್ಕೆ ನೀಡಿದ ಹೊಲ ಹಾಗೂ ಉತ್ತರಕ್ಕೆ ರಾಜಣ್ಣನವರ ಸುಬ್ಬಣ್ಣನವರ ಹೊಲ ಇರುವುದು. ಆ ರೀತಿ ಚೆಕ್ಕುಬಂದಿಗಳು ಇರುವುದಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಖರೀದಿ ಪತ್ರ ಆದ ನಂತರ ನಾನು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನೆ. ಬೇರೆ ಪ್ರಾಧಿಕಾರದಲ್ಲಿ ಪ್ರಶ್ನಿಸಿರುವುದಿಲ್ಲ. ನನ್ನ ತಾಯಿ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ 8 ನೇ ಪ್ರತಿವಾದಿಯನ್ನು ಕೇಳಿರುವರು ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಂತರ ದಾವಾ ಆಸ್ತಿಯನ್ನು ಖರೀದಿ ಮಾಡಿರುವರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕಾಲಕ್ಕೆ ಜಮೀನು ಸಾಗುವಳಿಗೆ ಯೋಗ್ಯವಾಗಿತ್ತು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಜಮೀನಿನ ನಾಲ್ಕು ಭಾಗಗಳಲ್ಲಿ ಒಡ್ಡು ಇತ್ತು. ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯು ಖರೀದಿ ಮಾಡಿದ ನತಂರ ಜಮೀನಿನ ನಾಲ್ಕು ಬದಿಗಳಲ್ಲಿ ಒಡ್ಡನ್ನು ಜೆಸಿಬಿ ಮುಖಾಂತರ ಹಾಕಿಸಿರುವರು ಎಂದರೆ ಸರಿಯಲ್ಲ. ಸದರಿ ಜಮೀನಿನ ಅಭಿವೃದ್ದಿಗಾಗಿ ಸಾಕಷ್ಟು ಹಣ ಖರ್ಚು ಮಾಡಿ ಸದರಿ ಜಮೀನನ್ನು ಸಾಗುವಳಿ ಯೋಗ್ಯ ಜಮೀನನ್ನಾಗಿ 8 ನೇ ಪ್ರತಿವಾದಿ ಮಾಡಿರುವರು ಎಂದರೆ ಸರಿಯಲ್ಲ.

ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ 8 ನೇ ಪ್ರತಿವಾದಿ ದಾವಾ ಜಮೀನಿನ ಸ್ವಾಧೀನ ಅನುಬೋಗದಲ್ಲಿರುವರು ಎಂದರೆ ಸರಿಯಲ್ಲ. ಖರೀದಿಯಾದ ನಂತರ 8 ನೇ ಪ್ರತಿವಾದಿಯ ಹೆಸರಿಗೆ ಪಹಣಿ ದಾಖಲಾಗಿರಲಿಲ್ಲ ಎಂದರೆ ಸರಿ. ಮ್ಯುಟೇಶನ್ ಆಗದೇ ಇರುವ ವಿಚಾರ 1 ನೇ ಪ್ರತಿವಾದಿಯ ಗಮನಕ್ಕೆ ಬಂದಿತು ಎಂದರೆ

ನನಗೆ ಗೊತ್ತಿಲ್ಲ. ಆಗ 1 ನೇ ಪ್ರತಿವಾದಿ ಅಂದರೆ ನನ್ನ ತಮ್ಮ ನನ್ನೊಂದಿಗ ಚರ್ಚೆ ಮಾಡಿದರು ಎಂದರೆ ಸರಿಯಲ್ಲ. ಅದನ್ನು ದುರುಪಯೋಗ ಪಡಿಸಿಕೊಂಡು 1 ನೇ ಪ್ರತಿವಾದಿಯೊಂದಿಗೆ ಮೀಲಾಪಿಯಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಕೊಟ್ಟ ನಂತರ ಖರೀದಿ ಹಣವನ್ನು ನನ್ನ ತಾಯಿ ಹಾಗೂ 1 ನೇ ಪ್ರತಿವಾದಿ ಬಳಸಿಕೊಂಡಿರುವರು ಎಂದರೆ ನನಗೆ ಗೊತ್ತಿಲ್ಲ, ಬಳಸಿಕೊಂಡಿರಬಹುದು. 8 ನೇ ಪ್ರತಿವಾದಿಯ ಹಕ್ಕನ್ನು ನಷ್ಟಗೊಳಿಸಲು ನಾನು ಇತರ ಪ್ರತಿವಾದಿಗಳೊಂದಿಗೆ ಮೀಲಾಪಿಯಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

03-04-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**